# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1594

**ಸದಸ್ಯರ ಹೆಸರು** : ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು)

**ಉತ್ತರಿಸುವ ದಿನಾಂಕ** : 21.03.2025.

**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 69919 ಅಂಗನವಾಡಿ ಕೇಂದ್ರಗಳು ಇರುತ್ತವೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ)<br><br>ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ: 66315 |
| ಆ) | ಅಂಗನವಾಡಿಗಳ ಮೂಲಸೌಕರ್ಯ ಸುಧಾರಣೆಗೆ (Anganwadi Infrastructure Development) ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಪೌಷ್ಠಿಕ ಆಹಾರ ಯೋಜನೆಯಡಿ (Supplementary Nutrition Program) ವಿಜಯಪುರ ಜಿಲ್ಲೆಯಲ್ಲಿ ಮಕ್ಕಳಿಗೆ ಸೂಕ್ತ ಆಹಾರ ದೊರಕುತ್ತಿದೆಯೇ; | ಅಂಗನವಾಡಿ ಕಟ್ಟಡಗಳ ನಿರ್ವಹಣೆ ಯೋಜನೆಯಡಿ ರೂ. 902.13 ಲಕ್ಷಗಳ ಅನುದಾನದಲ್ಲಿ ಹಾಗೂ ಲಿಂಕ್ ಡಾಕ್ಯುಮೆಂಟ್ ಯೋಜನೆಯಲ್ಲಿ ರೂ.3033 ಲಕ್ಷಗಳ ಅನುದಾನಗಳಲ್ಲಿ ಅಂಗನವಾಡಿ ಕಟ್ಟಡಗಳಿಗೆ ಮೂಲ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗುತ್ತಿದೆ.<br><br>ಅಂಗನವಾಡಿಗಳಿಗೆ ಶೌಚಾಲಯ ನಿರ್ಮಾಣ ಹಾಗೂ ಕುಡಿಯುವ ನೀರಿನ ಸಂಪರ್ಕ ಒದಗಿಸಲು ಕೇಂದ್ರ ಮತ್ತು ರಾಜ್ಯ ಸಹಭಾಗಿತ್ವದಲ್ಲಿ ರೂ. 1378.00 ಲಕ್ಷಗಳ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಗಳಿಗೆ ಬಿಡುಗಡೆ ಗೊಳಿಸಲಾಗಿದೆ.<br><br>ಪೌಷ್ಠಿಕ ಆಹಾರ ಯೋಜನೆಯಡಿ ಕೇಂದ್ರ ಸರ್ಕಾರದ ಮಿಷನ್ ಪೋಷಣ್ 2.0 ರಲ್ಲಿ ಪೂರಕ ಪೌಷ್ಠಿಕ ಆಹಾರ ವಿತರಣೆಗಾಗಿ ನಿಗಧಿ ಪಡಿಸಿದ ಮಾರ್ಗಸೂಚಿಯಂತೆ, ನಿಗದಿತ ಪ್ರಮಾಣದ ಕ್ಯಾಲೋರಿ ಮತ್ತು ಪ್ರೋಟೀನ್ ಒಳಗೊಂಡ ಪೂರಕ ಪೌಷ್ಠಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಒದಗಿಸಲಾಗುತ್ತಿದೆ. |
| ಇ) | ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ವೇತನ ಮತ್ತು ಇನ್ನಿತರೆ ಸೌಲಭ್ಯಗಳಾವುದು; ಇವರಿಗೆ ವೇತನ ಹೆಚ್ಚಳ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ವೇತನ ಮತ್ತು ಇನ್ನಿತರೆ ಸೌಲಭ್ಯಗಳು ಹಾಗೂ ವೇತನ ಹೆಚ್ಚಳ ಮಾಡಲು ಸರ್ಕಾರ ಕೈಗೊಂಡ ಕ್ರಮಗಳ ವಿವರವನ್ನು **ಅನುಬಂಧ-2 ರಲ್ಲಿ** ಒದಗಿಸಿದೆ. |

**ಸಂಖ್ಯೆ: ಮಮಇ 99 ಐಸಿಡಿ 2025**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

| ಅನುಬಂಧ-01 | | |
|---|---|---|
| **ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ವಿವರ** | | |
| **ಕ್ರ. ಸಂ** | **ಜಿಲ್ಲೆಯ ಹೆಸರು** | **ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ** |
| 1 | ಬಾಗಲಕೋಟೆ | 2444 |
| 2 | ಬೆಂಗಳೂರು(ಗ್ರಾ) | 1277 |
| 3 | ರಾಮನಗರ | 1586 |
| 4 | ಬೆಂಗಳೂರು(ನ) | 2877 |
| 5 | ಬೆಳಗಾವಿ | 5656 |
| 6 | ಬಳ್ಳಾರಿ | 1358 |
| 7 | ಬೀದರ್ | 2051 |
| 8 | ವಿಜಯಪುರ | 2755 |
| 9 | ಚಾಮರಾಜನಗರ | 1442 |
| 10 | ಚಿಕ್ಕಮಗಳೂರು | 1858 |
| 11 | ಚಿತ್ರದುರ್ಗ | 2428 |
| 12 | ದಕ್ಷಿಣ ಕನ್ನಡ | 2131 |
| 13 | ದಾವಣಗೆರೆ | 1771 |
| 14 | ಧಾರವಾಡ | 1622 |
| 15 | ಗದಗ | 1248 |
| 16 | ಕಲಬುರ್ಗಿ | 3420 |
| 17 | ಯಾದಗಿರಿ | 1568 |
| 18 | ಹಾಸನ | 2691 |
| 19 | ಹಾವೇರಿ | 1991 |
| 20 | ಕೋಲಾರ | 2180 |
| 21 | ಚಿಕ್ಕಬಳ್ಳಾಪುರ | 2014 |
| 22 | ಕೊಡಗು | 888 |
| 23 | ಕೊಪ್ಪಳ | 1960 |
| 24 | ಮಂಡ್ಯ | 2558 |
| 25 | ಮೈಸೂರು | 2933 |
| 26 | ರಾಯಚೂರು | 2856 |
| 27 | ಶಿವಮೊಗ್ಗ | 2563 |
| 28 | ತುಮಕೂರು | 4199 |
| 29 | ಉಡುಪಿ | 1222 |
| 30 | ಉತ್ತರಕನ್ನಡ | 2782 |
| 31 | ವಿಜಯನಗರ | 1590 |
| **ಒಟ್ಟು** | | **69919** |

# ಅನುಬಂಧ-2

## ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಮತ್ತು ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಈ ಕೆಳಕಂಡಂತೆ ಸೇವಾ ಆಧಾರಿತ ಮಾಸಿಕ ಗೌರವಧನವನ್ನು ಪಾವತಿಸಲಾಗುತ್ತಿದೆ.

| ಸಿಬ್ಬಂದಿ ವಿವರ | ಗೌರವಧನ (ರೂ. ಗಳಲ್ಲಿ) | | |
|---|---|---|---|
| | 0-10 ವರ್ಷದವರೆಗೆ ಸೇವೆ ಸಲ್ಲಿಸಿದವರು | 10 ರಿಂದ 20 ವರ್ಷದವರೆಗೆ ಸೇವೆ ಸಲ್ಲಿಸಿದವರು | 20 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರು |
| ಅಂಗನವಾಡಿ ಕಾರ್ಯಕರ್ತೆ | 11,000 | 11,250 | 11,500 |
| ಅಂಗನವಾಡಿ ಸಹಾಯಕಿ | 6,250 | 6,500 | 6,750 |
| ಮಿನಿ ಅಂಗನವಾಡಿ ಕಾರ್ಯಕರ್ತೆ | 7,250 | 7,500 | 7,750 |

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಗೌರವಧನದ ಜೊತೆಗೆ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತಿದೆ.

- ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಗುರುತರ ಖಾಯಿಲೆಗಳಿಗೆ ವೈದ್ಯಕೀಯ ಮರುಪಾವತಿಯಾಗಿ ಗರಿಷ್ಟ ರೂ.50,000/- ಗಳನ್ನು ನೀಡಲಾಗುತ್ತಿದೆ.

- ಕರ್ತವ್ಯನಿರತರಾಗಿದ್ದು, ಮರಣ ಹೊಂದಿದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ರೂ.50,000/- ಗಳ ಮರಣ ಪರಿಹಾರವನ್ನು ನೀಡಲಾಗುತ್ತಿದೆ.

- ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ 180 ದಿನಗಳ ಹೆರಿಗೆ ರಜೆ ಸೌಲಭ್ಯವನ್ನು ನೀಡಲಾಗುತ್ತಿದೆ.

- ಎನ್.ಪಿ.ಎಸ್.ಲೈಟ್‌ಯೋಜನೆಯಡಿ ನೋಂದಣಿಯಾದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕ್ರಮವಾಗಿ ಮಾಸಿಕ ಗೌರವಧನದಲ್ಲಿ ರೂ.150/- ಹಾಗೂ ಸಹಾಯಕಿಯರಿಗೆ ರೂ.84/- ಗಳ ವಂತಿಗೆಯೊಂದಿಗೆ ಅಷ್ಟೇ ಪ್ರಮಾಣದ ಸರ್ಕಾರದ ವಂತಿಗೆಯನ್ನೂ ಸೇರಿಸಿ ಪಾವತಿಸಲಾಗುತ್ತಿದ್ದು, ನಿವೃತ್ತಿ ನಂತರದಲ್ಲಿ ಎನ್.ಪಿ.ಎಸ್.ಲೈಟ್‌ಯೋಜನೆಯಡಿ ನಿವೃತ್ತಿ ಉಪಧನ ನೀಡಲಾಗುತ್ತಿದೆ.

- ಎನ್.ಪಿ.ಎಸ್.ಲೈಟ್‌ಯೋಜನೆಯಿಂದ ವಂಚಿತರಾಗಿ ನಿವೃತ್ತಿ ಹೊಂದಿದ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಅನುಕ್ರಮವಾಗಿ ರೂ.50,000/- ಮತ್ತು ರೂ.30,000/- ಗಳನ್ನು ಇಡಿಗಂಟು ಯೋಜನೆಯಡಿ ಪಾವತಿಸಲಾಗುತ್ತಿದೆ.

- ಪ್ರಧಾನ ಮಂತ್ರಿ ಜೀವನ್‌ಜ್ಯೋತಿ ಭಿಮಾ ಯೋಜನೆ (PMJJBY) ಯಡಿ 18-50 ವರ್ಷದ ವಯೋಮಾನದ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ 2023-24 ನೇ ಸಾಲಿನಲ್ಲಿ ವಾರ್ಷಿಕ ವಂತಿಗೆಯಾಗಿ ರೂ.436/- ಗಳನ್ನು ಆರ್ಥಿಕ ವಿಮೆ ಸೌಲಭ್ಯವನ್ನು ಒದಗಿಸುತ್ತಿದ್ದು, ಮರಣ ಹೊಂದಿದಲ್ಲಿ ರೂ.2.00 ಲಕ್ಷಗಳನ್ನು ಕ್ಲೈಮ್ಸ್ ಮುಖೇನ ಸೌಲಭ್ಯವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

- ಪ್ರಧಾನಮಂತ್ರಿ ಸುರಕ್ಷಾ ಭಿಮಾ ಯೋಜನೆಯಡಿ (PMSBY) 18-59 ವರ್ಷದ ವಯೋಮಾನದ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ರೂ.20/- ಗಳನ್ನು ವಾರ್ಷಿಕ ವಂತಿಗೆಯಾಗಿ ಪಾವತಿಸಲಾಗುತ್ತಿದ್ದು, ಅಪಘಾತ ಹೊಂದಿ, ಮರಣ ಹೊಂದಿದರೆ ರೂ.2.00 ಲಕ್ಷದವರೆಗೂ Life coverage ಇರುತ್ತದೆ ಮತ್ತು ಅಪಘಾತದಲ್ಲಿ ಭಾಗಶ: ಶಾಶ್ವತ ಅಂಗವಿಕಲತೆ ಹೊಂದಿದಲ್ಲಿ ರೂ.1.00 ಲಕ್ಷ ಕ್ಲೈಮ್ಸ್ ಮುಖೇನ ಸೌಲಭ್ಯವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ

- ಸರ್ಕಾರದ ಆದೇಶ ದಿನಾಂಕ: 21-06-2024 ರಲ್ಲಿ 2023-24 ನೇ ಸಾಲಿನ ಆರ್ಥಿಕ ವರ್ಷದಿಂದ ನಿವೃತ್ತಿ ಹೊಂದುವ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರು ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ "ನಿವೃತ್ತಿ ಉಪಧನ " (Gratuity) ಯೋಜನೆಯಡಿ ಸೇವಾ ಆಧಾರಿತ ಆರ್ಥಿಕ ಸೌಲಭ್ಯ ಒದಗಿಸಲು ಪ್ರತ್ಯೇಕ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ: ಮಮ ಇ 190 ಐಸಿಡಿ 2021, ದಿನಾಂಕ:05.03.2022ರಲ್ಲಿ ಸೂಚಿಸಿರುವಂತೆ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಮೃತಪಟ್ಟಲ್ಲಿ ಅನುಕಂಪದ ಆಧಾರದಲ್ಲಿ ಮಗಳು ಅಥವಾ ಸೊಸೆ ಇಬ್ಬರಲ್ಲಿ ಒಬ್ಬರಿಗೆ ಅನುಕಂಪದ ಆಧಾರದ ಆಯ್ಕೆಗೆ ಅವಕಾಶ ಕಲ್ಪಿಸಲಾಗಿದೆ.